ಉಳಿದಿವೆ. ಇದರ ಬಗ್ಗೆ ನಿಮ್ಮ ನಿಲುವು ಏನು? ಮಾನ್ಯ ಮುಖ್ಯಮಂತ್ರಿಗಳು ಸಂಘರ್ಷಕ್ಕಾದರೂ ಸಿದ್ಧ ಎನ್ನುವ ಭಾಷೆಯನ್ನು ಬಳಸಿದ್ದಾರೆ. ಈ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್:- ಯೋಜನೆಗಳು ಬಹಳ ಇವೆ. ವ್ಯಾಪ್ತಿ ಬಹಳ ಆಯಿತು.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ ದಿನಾಂಕ: 27-3-95 ರಂದು ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ಉತ್ತರಿಸುವ 5ನೇ ಪಟ್ಟಿಯಲ್ಲಿರುವ 87 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ :- ವಿದ್ಯುತ್ ಸಂಪರ್ಕ ನೀಡುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 101 (417)
ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು)

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಮನೆಗಳಿಗೆ ಗೃಹಬಳಕೆಗಾಗಿ ಕೊಡುವ ವಿದ್ಯುತ್ ಜೋಡಣೆಯ ಸಂಪರ್ಕವನ್ನು ತೋರಿರುವ ಅರ್ಜಿಗಳಿಗೆ ನ್ಯಾಯಾಂಗದ ಆಕ್ಷೇಪ ಬಿಟ್ಟು ಬೇರೆ ಯಾರ ಆಕ್ಷೇಪ ಇದ್ದರೂ ಕಡ್ಡಾಯವಾಗಿ ಜೋಡಣೆ ಕೊಡಬೇಕೆಂದು ಕೆ.ಇ.ಬಿ. ಅಧಿಕಾರಿಗಳಿಗೆ ಆಜ್ಞೆಕೊಡಲು ಸರ್ಕಾರ ಬದ್ಧವಾಗಿದೆಯೇ?

ಶ್ರೀ ಜೆ.ಹೆಚ್. ಪಟೇಲ್
(ಉಪ ಮುಖ್ಯಮಂತ್ರಿಗಳು)

ಅ) ಗೃಹ ಬಳಕೆಗಾಗಿ ವಿದ್ಯುತ್ ಸಂಪರ್ಕವನ್ನು ಮಂಡಳಿಯು ಅರ್ಜಿದಾರರುಗಳಿಗೆ ನೀಡಬೇಕಾದರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ವಿದ್ಯುತ್ ಸರಬರಾಜು ನಿಬಂಧನೆಗಳು 1988ರಲ್ಲಿ ತಿಳಿಸಿರುವ ಷರತ್ತುಗಳನ್ನು ಪಾಲಿಸಲೇಬೇಕು ಮತ್ತು ಅಗತ್ಯವಿರುವ ದಾಖಲೆಗಳನ್ನು ನೀಡಲೇಬೇಕಾಗುತ್ತದೆ. ಅರ್ಜಿದಾರನು ಸಂಬಂಧಿಸಿದ ಅಧಿಕಾರ ವರ್ಗದಿಂದ ನಿರಾಕ್ಷೇಪಣಾ ಪತ್ರ ಅಥವಾ ಮಂಜೂರಾದ ನಕ್ಷೆಯನ್ನು ಅರ್ಜಿಯ ಜೊತೆಗೆ ಮಂಡಳಿಗೆ ಸಲ್ಲಿಸಬೇಕಾಗಿದೆ. ಅಲ್ಲದೇ, ಮಂಡಳಿಯ ವಿದ್ಯುತ್ ಸರಬರಾಜು ನಿಬಂಧನೆಗಳು 1988ರ ಪ್ರಕಾರ ವಿದ್ಯುತ್ ಕೋರಿದ ಅರ್ಜಿದಾರನ ಮನೆಗೆ ಎಳೆಯುವ ಸರ್ವೀಸ್ ಲೈನು